## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ ಕ್ರಮವಹಿಸುವ ಸಂಯೋಜನಾ ಪ್ರಸ್ತಾವನೆಗಳಿಗೆ 2024-25ನೇ ಸಾಲಿನ ಸಂಯೋಜನಾ ಪ್ರಕ್ರಿಯೆಯ ವೇಳಾಪಟ್ಟಿಯ ಕುರಿತು.

************

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ ವಿಶ್ವವಿದ್ಯಾಲಯಗಳು ಮತ್ತು ಸ್ಥಳೀಯ ವಿಚಾರಣಾ ಸಮಿತಿಯು ಕೈಗೊಳ್ಳಬೇಕಾದ ನಿಯಮಗಳನ್ನು ಮತ್ತು ಕ್ರಮಗಳನ್ನು ವಿವರಿಸಲಾಗಿದೆ.

ಅದರನ್ವಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ Opening New Colleges, Extension of existing affiliation, Continuation of affiliation, Permanent affiliation, Change/Addition of subject, Division of faculty, Increase of intake, Change of name, Change of place, Closure and withdrawal of a college, Local inquiry committee formation and Transfer of management ವಿವಿಧ ರೀತಿಯ ಎಲ್ಲಾ ಸಂಯೋಜನೆ ಪ್ರಸ್ತಾವನೆಗಳನ್ನು ಕಡ್ಡಾಯವಾಗಿ UUCMS ಆನ್‌ಲೈನ್ ತಂತ್ರಾಂಶದ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ವೇಳಾಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಜಾರಿಗೊಳಿಸಲು ತೀರ್ಮಾನಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂ. ಇಡಿ 166 ಯುಎನ್‌ಇ 2023, ಬೆಂಗಳೂರು, ದಿನಾಂಕ:08.05.2024.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ ಕ್ರಮವಹಿಸುವ ಸಂಯೋಜನಾ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ವೇಳಾಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಈ ಕೆಳಕಂಡಂತೆ ಕೂಡಲೇ ಕಡ್ಡಾಯವಾಗಿ ಜಾರಿಗೊಳಿಸುವಂತೆ ಆದೇಶಿಸಿದೆ.

**Tentative Date for Affiliation Process through UUCMS Online portal**

| ಕ್ರ. ಸಂ | ವಿವರಗಳು | ಕೊನೆಯ ದಿನಾಂಕ | ಸಮಾನಾಂತರ ಚಟುವಟಿಕೆಗಳು |
|---|---|---|---|
| 1 | ಸರ್ಕಾರದ ಉಪಕಾರ್ಯದರ್ಶಿರವರ ಲಾಗಿನ್‌ನಲ್ಲಿ ದಿನಾಂಕ ನಿಗದೀಕರಿಸಿ UUCMS ಸಂಯೋಜನೆ ಪ್ರಾರಂಭ | 09.05.2024 | |
| 2 | ವಿಶ್ವವಿದ್ಯಾಲಯಗಳಿಂದ UUCMS ನಲ್ಲಿ ಶುಲ್ಕ ನಿಗದೀಕರಣ | 10.05.2024 | |
| 3 | ಕಾಲೇಜುಗಳಿಂದ, 2024-25 ನೇ ಸಾಲಿಗೆ ದತ್ತಾಂಶ ಸೇರ್ಪಡಿಕೆ/ ಇಂದೀಕರಣದೊಂದಿಗೆ ಅರ್ಜಿ ಮತ್ತು ಶುಲ್ಕ ಸಲ್ಲಿಕೆ | 25.05.2024 | ಕಾಲೇಜುಗಳು ಆನ್‌ಲೈನ್ ಅರ್ಜಿ ಸಲ್ಲಿಸುತ್ತಿರುವಂತೆ, LIC ತಂಡಗಳ ರಚನೆ ಮತ್ತು ತಂಡಗಳ ಕಾಲೇಜುಗಳ ಭೇಟಿ, ಮತ್ತು ಸಲ್ಲಿಸಿದ ವರದಿಗಳಿಗೆ |

| | | | |
|---|---|---|---|
| 4 | ವಿಶ್ವವಿದ್ಯಾಲಯಗಳಿಂದ ಸ್ಥಳೀಯ ಪರಿಶೀಲನ ಸಮಿತಿ ತಂಡಗಳ (LIC) ರಚನೆ, ತಂಡಗಳ ಕಾಲೇಜುಗಳ ಭೇಟಿ ಮತ್ತು ಆನ್‌ಲೈನ್‌ನಲ್ಲಿ ಪ್ರಾಥಮಿಕ ವರದಿ ಸಲ್ಲಿಕೆ | 05.06.2024 | ಸ್ಕೋರ್ ಉತ್ಪಾದನೆಗೆ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ ಅನುಮೋದನ |
| 5 | ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ LIC ಯ ಪ್ರಾಥಮಿಕ ವರದಿ ಅನುಮೋಧನೆ, ಸ್ಕೋರ್ ಉತ್ಪಾದನೆ ಮತ್ತು ಶಿಫಾರಸ್ಸಿಗಾಗಿ LIC ಗೆ ರವಾನೆ | 07.06.2024 | |
| 6 | ಸ್ಕೋರ್ ಉತ್ಪಾದನೆ ಆಧಾರದಲ್ಲಿ, LIC ಶಿಫಾರಸ್ಸಿನ ಸಲ್ಲಿಕೆ | 10.06.2024 | LIC ಶಿಫಾರಸ್ಸಿನ ಸಲ್ಲಿಸಿರುವ ಕಾಲೇಜುಗಳನ್ನು ವಿವಿಧ ಗುಂಪುಗಳಲ್ಲಿ ಶಾಸನಬದ್ಧ ಪ್ರಾಧಿಕಾರದಿಂದ ಅನುಮೋದನೆ |
| 7 | ಶಾಸನಬದ್ಧ ಪ್ರಾಧಿಕಾರದಿಂದ ಅನುಮೋದನೆ ಮತ್ತು ಸರ್ಕಾರಕ್ಕೆ ಆನ್‌ಲೈನ್ ಮುಖಾಂತರ ಪ್ರಸ್ತಾವನೆ ಸಲ್ಲಿಕೆ. | 15.06.2024 | |
| 8 | ವಿಶ್ವವಿದ್ಯಾಲಯಗಳ ಹಂತದಲ್ಲಿ ಅನುಮೋದಿಸುವ ಕಾಲೇಜುಗಳನ್ನು UUCMSನಲ್ಲಿ ಅನುಮೋದನೆ* | 17.06.2024 | ವಿಶ್ವವಿದ್ಯಾಲಯಗಳ ಹಂತದಲ್ಲಿ ಅನುಮೋದಿಸುವ ಮತ್ತು ಸರ್ಕಾರಕ್ಕೆ ಪ್ರಸ್ತಾವನೆಗಳ ಸಲ್ಲಿಕೆ |
| 9 | ಸರ್ಕಾರಕ್ಕೆ ಪ್ರಸ್ತಾವನೆಗಳ ಸಲ್ಲಿಕೆ | 20.06.2024 | |
| 10 | ಸರ್ಕಾರದ ಹಂತದಲ್ಲಿ ಅನುಮೋದಿಸುವ ಪ್ರಸ್ತಾವನೆಗಳು | 30.06.2024 | ಸರ್ಕಾರದಲ್ಲಿ ಪ್ರಸ್ತಾವನೆಗಳನ್ನು ಅನುಮೋದಿಸಿದಂತೆ UUCMS ನಲ್ಲಿ ಅನುಮೋದಿಸುವುದು. |
| 11 | ಸರ್ಕಾರದ ಹಂತದಲ್ಲಿ ಅನುಮೋದಿಸಿದ ಪ್ರಸ್ತಾವನೆಗಳನ್ನು UUCMS ನಲ್ಲಿ ಸರ್ಕಾರದ ಉಪಕಾರ್ಯದರ್ಶಿ ಅನುಮೋಧನೆ** | 30.06.2024 | |

*ವಿಶ್ವವಿದ್ಯಾಲಯಗಳ ಹಂತದಲ್ಲಿ ಅನುಮೋದನೆಗೊಂಡ ಕೂಡಲೇ, UUCMS ನಲ್ಲಿ ಪ್ರವೇಶಾತಿಗಾಗಿ ಅವಶ್ಯವಿರುವ Intake/ Course/ Combination/Subject ಗಳು ಪ್ರವೇಶಾತಿಯ ಅರ್ಜಿದಾರರಿಗೆ ದಿನಾಂಕ: 17.06.2024ರಿಂದ ಕಾಣಸಿಗುತ್ತವೆ.

**ಸರ್ಕಾರದ ಹಂತದಲ್ಲಿ ಅನುಮೋದನೆಗೊಂಡ ಕಾಲೇಜುಗಳಿಗೆ ದಿನಾಂಕ:30.06.2024ರ ನಂತರ Intake/ Course/ Combination/Subject ಗಳು ಪ್ರವೇಶಾತಿಯ ಅರ್ಜಿದಾರರಿಗೆ ಕಾಣಸಿಗುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಶಿಕಲಾ.ಸಿ) 08/05/24
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1).

**ಇವರಿಗೆ:**

1. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
3. ಕುಲಸಚಿವರುಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
6. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಗಾಂಧಿನಗರ, ಬೆಂಗಳೂರು.
7. ಮಾನ್ಯ ರಾಜ್ಯಪಾಲರ ಆಪ್ತ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
8. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301

ಇ-ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ: ಸಿಡಿಸಿ-3/169/ಸಂಯೋಜನೆ/ಪ.ಪ್ರ/24-25/2018-19

ದಿನಾಂಕ 09.05.2024

## ಸಂಯೋಜನಾ ಪ್ರಕಟಣೆ

**ವಿಷಯ : 2024-25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗೆ ಅರ್ಜಿಯನ್ನು UUCMS ಮುಖಾಂತರ ಸಲ್ಲಿಸುವ ಬಗೆಗೆ.**

**ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಇಡಿ 166 ಯುಎನ್ಇ 2023, ಬೆಂಗಳೂರು, ದಿನಾಂಕ 08.05.2024**

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಉಲ್ಲೇಖಿತ ಆದೇಶದಂತೆ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು 2024-25ನೇ ಶೈಕ್ಷಣಿಕ ವರ್ಷದಲ್ಲಿ ತಮ್ಮ ಕಾಲೇಜುಗಳ ಸ್ನಾತಕ ಪೂರ್ವ ಹಾಗೂ ಸ್ನಾತಕೋತ್ತರ ಕೋರ್ಸುಗಳ ತಾತ್ಕಾಲಿಕ ಸಂಯೋಜನೆ ನವೀಕರಿಸಲು; ಹೊಸ ಕೋರ್ಸ್/ ವಿಷಯ/ ಭಾಷೆಗಳು ಹಾಗೂ ವಿದ್ಯಾರ್ಥಿ ಪ್ರಮಾಣವನ್ನು ವಿಸ್ತರಿಸಲು; ಈಗಿರುವ ತಾತ್ಕಾಲಿಕ ಸಂಯೋಜನೆಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಲು ಮತ್ತು ಹೊಸ ಕಾಲೇಜು ಆರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಕೋರಲು **ಆನ್‌ಲೈನ್ ಅರ್ಜಿಯನ್ನು UUCMS ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. (website ವಿಳಾಸ: UUCMS.karnataka.gov.in).**

1. ನೊಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ ಸಂಸ್ಥೆಗಳವರು ಮಾತ್ರ ಹೊಸದಾಗಿ ಪ್ರಥಮ ದರ್ಜೆ ಕಾಲೇಜನ್ನು ಕನಿಷ್ಠ ಎರಡು ಪ್ರತ್ಯೇಕ ಕೋರ್ಸ್‌ಗಳೊಡನೆ ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಬೇಕು.

2. ಐದು ವರ್ಷಗಳ ನಿರಂತರ ತಾತ್ಕಾಲಿಕ ಸಂಯೋಜನೆಯನ್ನು ಪಡೆದು, ಅಸ್ತಿತ್ವದಲ್ಲಿರುವ ಕೋರ್ಸು/ವಿಷಯಗಳಿಗೆ ಸ್ಥಳೀಯ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿ, ಉತ್ತಮ ಶೈಕ್ಷಣಿಕ ಗುಣಮಟ್ಟ ಹೊಂದಿದ್ದು, ನ್ಯಾಕ್ ಸಂಸ್ಥೆಯ ಮಾನ್ಯತೆ (ಕನಿಷ್ಠ C Grade) ಹೊಂದಿರುವಂತಹ ಕಾಲೇಜಿನವರು ಸದರಿ ಕೋರ್ಸು/ವಿಷಯಗಳಿಗೆ ಶಾಶ್ವತ ಸಂಯೋಜನೆ ಮಂಜೂರಾತಿ ಕೋರುವುದು (ಖಾಸಗಿ ಕಾಲೇಜುಗಳು ನಿಗದಿತ ಶುಲ್ಕ ಪಾವತಿಸಬೇಕಾಗಿದೆ)

3. ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕಾಲೇಜುಗಳು ಹಾಗೂ ಸರ್ಕಾರದ ಶಿಕ್ಷಣ ಇಲಾಖೆಯ ಮಾರ್ಗಸೂಚಿಯ ಪತ್ರ ಸಂಖ್ಯೆ (1) ಇಡಿ 99 ಯುಎನ್ಇ 2002, ದಿನಾಂಕ 02.11.2002 (2) ಇಡಿ 107 ಯುಆರ್‌ಸಿ 2006 ದಿನಾಂಕ 21.08.2006 ರಲ್ಲಿ ತಿಳಿಸಿರುವಂತೆ ನಿರಂತರ ಐದು ವರ್ಷ ಸಂಯೋಜನೆ ಪೂರೈಸಿ, ಸ್ನಾತಕೋತ್ತರ ಕೋರ್ಸಿಗೆ ಸಂಬಂಧಿಸಿದ ವಿಷಯದಲ್ಲಿ ಕನಿಷ್ಠ ನಾಲ್ಕು ಜನ ಅರ್ಹ ಬೋಧಕರನ್ನು ಹೊಂದಿದ್ದು (ಅವರಲ್ಲಿ ಇಬ್ಬರು Ph.D. ಹೊಂದಿರಬೇಕು) ಮತ್ತು ಸಂಶೋಧನೆ ಕಾರ್ಯಕ್ಕಾಗಿ ಪ್ರತ್ಯೇಕ ವ್ಯವಸ್ಥೆಯ ಮೂಲಭೂತ ಸೌಲಭ್ಯ ಹೊಂದಿರುವ ಕಾಲೇಜುಗಳವರು 2024-25ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸಲು ಅರ್ಜಿಯನ್ನು ಸಲ್ಲಿಸಬೇಕು. **ಹಾಲಿ ಅಸ್ತಿತ್ವದಲ್ಲಿರುವ ಎಂ.ಬಿ.ಎ. & ಎಂ.ಸಿ.ಎ. ಕೋರ್ಸ್‌ಗಳಿಗೆ ಸಂಯೋಜನೆ ನವೀಕರಣಗೊಳಿಸಲು ಎ.ಐ.ಸಿ.ಟಿ.ಇ./ಯು.ಜಿ.ಸಿ./ರಾಜ್ಯ ಸರ್ಕಾರದ ನಿಯಮಾವಳಿಯನ್ನು ಅನುಸರಿಸುವ ಷರತ್ತಿಗೆ ಒಳಪಟ್ಟಿರಬೇಕು.**

ಪು.ತಿ.ನೋ.

To upload on univ website
14/05/2024

4. **ನೋಂದಾಯಿತ** ಸಂಸ್ಥೆಗಳು ಮಾತ್ರ ಬಿ.ಎಡ್. ಕಾಲೇಜನ್ನು ಪ್ರಾರಂಭಿಸಲು **ಎನ್.ಸಿ.ಟಿ.ಇ.ಯಿಂದ ಮಾನ್ಯತೆ** ಪಡೆದಂತಹ ಸಂಸ್ಥೆಯವರು ಮಾತ್ರ ಹೊಸ ಬಿ.ಎಡ್. ಬಿ.ಪಿ.ಎಡ್., ಬಿ.ಎ.ಎಡ್., ಬಿ.ಎಸ್ಸಿ.ಎಡ್. ಕೋರ್ಸ್‌ಗಳನ್ನು ನಡೆಸುವಂತಹ ಸಂಸ್ಥೆಯವರು ಎಂ.ಎಡ್., ಎಂ.ಪಿ.ಎಡ್., ಎಂ.ಎಸ್ಸಿ.ಎಡ್. ಸ್ನಾತಕೋತ್ತರ ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಅರ್ಜಿ ಸಲ್ಲಿಸಬಹುದು.
5. ಯು.ಜಿ.ಸಿ., ಸರ್ಕಾರ ಹಾಗೂ ವಿಶ್ವವಿದ್ಯಾನಿಲಯ ಸಂಯೋಜನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ನೀತಿ ಸಂಹಿತೆಗಳನ್ನು / ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
6. ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮಾವಳಿಯನ್ವಯ ಕೋರ್ಸ್/ವಿಷಯ/ಐಚ್ಛಿಕ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ಪರಿನಿಯಮಾವಳಿಯಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕೋರ್ಸ್/ವಿಷಯ/ಐಚ್ಛಿಕ ವಿಷಯಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಸರ್ಕಾರದ ಆದೇಶಾನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಕಾಲೇಜುಗಳು ನಿಗದಿತ ಸಂಯೋಜನಾ ಶುಲ್ಕದಲ್ಲಿ ಶೇಕಡಾ 50ರಷ್ಟು ಮಾತ್ರ ಪಾವತಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅಂತಹ ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ಶೇ.50ರ ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ.
8. ಅರ್ಜಿಯನ್ನು **ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 570005** ಇವರ ಹೆಸರಲ್ಲಿ ಹಾರ್ಡ್ ಕಾಪಿಯನ್ನು **– ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ, ಬೋಗಾದಿ ರಸ್ತೆ, ಮಾನಸಗಂಗೋತ್ರಿ, ಮೈಸೂರು 570 006 ಇವರಿಗೆ ಸಲ್ಲಿಸುವುದು.**
9. UUCMS **ಪೋರ್ಟಲ್‌ನಲ್ಲಿ ಆನ್‌ಲೈನ್ ಅರ್ಜಿಗಳನ್ನು ದಿನಾಂಕ 9-5-2024ರಿಂದ ಪ್ರಾರಂಭಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ದಿನಾಂಕ 25-05-2024ರಂದು ಕೊನೆಯ ದಿನವಾಗಿರುತ್ತದೆ. ಆಸಕ್ತರು ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.**

**ಹೊಸ ಕಾಲೇಜನ್ನು ಪ್ರಾರಂಭಿಸಲಿಚ್ಛಿಸುವ ಸಂಘ ಸಂಸ್ಥೆಗಳವರು ಅರ್ಜಿಯೊಡನೆ ಈ ಕೆಳಕಂಡ ಮಾಹಿತಿಗಳನ್ನು ತಪ್ಪದೆ ಲಗತ್ತಿಸತಕ್ಕದ್ದು ಹಾಗೂ ಹೆಚ್ಚಿನ ಮಾಹಿತಿಗೆ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಸಂಪರ್ಕಿಸುವುದು**

1. ವಿದ್ಯಾಸಂಸ್ಥೆಯ ನೋಂದಣಿ ದೃಢೀಕೃತ ಪ್ರತಿ
2. ಮೆಮೊರಾಂಡಮ್ ಆಫ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ರೂಲ್ಸ್, ರೆಗ್ಯುಲೇಶನ್ಸ್ ಮತ್ತು ಬೈಲಾ ಪ್ರತಿ
3. ಟ್ರಸ್ಟ್ ಆಗಿದ್ದರೆ ಆ ಟ್ರಸ್ಟ್ ಡೀಡ್‌ನ ಒಂದು ಪ್ರತಿ ಹಾಗೂ ಸಂಬಂಧಪಟ್ಟ ಕಾಯಿದೆಯಡಿಯಲ್ಲಿ ನೋಂದಣಿಯಾಗಿರುವುದಕ್ಕೆ ದೃಢೀಕೃತ ಪ್ರತಿ ಮತ್ತು ಶೈಕ್ಷಣಿಕ ಉಪಯೋಗಕ್ಕೆ ಸಂಬಂಧಪಟ್ಟಂತೆ ಟ್ರಸ್ಟ್‌ನಲ್ಲಿ ತೆಗೆದುಕೊಂಡ ನಿರ್ಣಯದ ಪ್ರತಿ
4. ಸೊಸೈಟಿ/ಟ್ರಸ್ಟ್ ಲೆಕ್ಕಗಳ ಆಡಿಟ್ ವರದಿಯ ಪ್ರತಿ
5. ಕಾಲೇಜಿನ ಲೆಕ್ಕಗಳ ಆಡಿಟ್ ವರದಿ ಪ್ರತಿ
6. ಹಿಂದಿನ ವರ್ಷದ ವಾರ್ಷಿಕ ವರದಿಯ ಪ್ರತಿ
7. ಕಾಲೇಜನ್ನು ಸ್ಥಾಪಿಸಬೇಕೆಂದಿರುವ ಸ್ಥಳ ಮತ್ತು ಅದರ ಸೂಕ್ತತೆ ವಿವಾದ ಮುಕ್ತವಾಗಿರುವ ಬಗೆಗೆ ಮುಚ್ಚಳಿಕೆ ಪ್ರತಿ
8. ಪ.ಜಾ/ಪ.ಪಂಗಡದ ಆಡಳಿತ ಮಂಡಳಿಯವರು ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣಪತ್ರ
9. ಕಾಲಕಾಲಕ್ಕೆ ರಚಿಸಿರುವ / ರಚಿಸಲಾಗುವ ವಿಶ್ವವಿದ್ಯಾನಿಲಯದ ಅಧಿನಿಯಮ (Act) ಪರಿನಿಯಮ/ಶಾಸನ (Statutes); ನಿಬಂಧನೆ (Regulations) ಅಧ್ಯಾದೇಶ (Ordinance); ನಿಯಮ (Rules) ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವುದಾಗಿ ತಿಳಿಸುವ ಮುಚ್ಚಳಿಕೆ ಪತ್ರ (Undertaking Part-'c')ವನ್ನು 100 ರೂ. ಛಾಪ ಕಾಗದದಲ್ಲಿ ಮುದ್ರಿಸಿ ನೋಟರಿರವರಿಂದ ದೃಢೀಕರಿಸಿ ಲಗತ್ತಿಸುವುದು.
10. ಸದರಿ ಜಮೀನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರು ಬಗ್ಗೆ ಸಬ್‌ರಿಸ್ಟ್ರರ್ ಕಛೇರಿಯಲ್ಲಿ ನೊಂದಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ

Cont......

ನಿಗದಿತ ಅರ್ಜಿ ಸಲ್ಲಿಸಬೇಕಾದ ಸಂಯೋಜನಾ ಶುಲ್ಕದ ವಿವರ / ಸಂಯೋಜನೆಗೆ ಸಂಬಂಧಪಟ್ಟ ನಿಯಮಗಳನ್ನು ಕಛೇರಿಯ ವೇಳೆಯಲ್ಲಿ **ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರ ಕಛೇರಿ, ಮೌಲ್ಯಭವನ, ಬೋಗಾದಿ ರಸ್ತೆ, ಮಾನಸಗಂಗೋತ್ರಿ, ಮೈಸೂರು 570 006** (ದೂರವಾಣಿ ಸಂಖ್ಯೆ 2419306/415 ಇ.ಮೇಲ್ ವಿಳಾಸ cdc@uni-mysore.ac.in) ಇವರಿಂದ ಪಡೆದುಕೊಳ್ಳಬಹುದಾಗಿದೆ.

**ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಸಂಬಂಧಿಸಿದಂತೆ, ಸಂಯೋಜನಾ ಶುಲ್ಕದ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ಅನ್ನೂ ನೋಡಬಹುದು.**

ವಿ.ಸೂ.: 1. ಶುಲ್ಕದ ವಿವರದ ಬಗ್ಗೆ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ ಎಸಿ2(ಎಸ್)/21/2023-24 ದಿನಾಂಕ 23.08.2023ರ ಪ್ರಕಟಣೆಯ Affiliation fee ಪುಟ ಸಂಖ್ಯೆ 28, 29, 30, 31, 32 ಮತ್ತು 33ರಲ್ಲಿ ತಿಳಿಯಬಹುದಾಗಿದೆ

2. NAAC ಮತ್ತು 2(f) & 12 (b) ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ಲಗತ್ತಿಸುವುದು.

3. ಶಾಶ್ವತ ಸಂಯೋಜನೆ ಕೋರುವ ಕಾಲೇಜಿನವರು ಐದು ವರ್ಷದ ಸಂಯೋಜನಾ ಆದೇಶ ಮತ್ತು ಸ್ಥಳೀಯ ತನಿಖಾ ಸಮಿತಿಯ ವರದಿಗಳನ್ನು ಕಡ್ಡಾಯವಾಗಿ ಅರ್ಜಿಯಲ್ಲಿ ಲಗತ್ತಿಸುವುದು.

ಆದೇಶದ ಮೇರೆಗೆ

ಕುಲಸಚಿವರು

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಪಡೆದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು/ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರುಗಳು
2. ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ
3. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ/ತಾಂತ್ರಿಕ ಶಿಕ್ಷಣ ಇಲಾಖೆ/ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ, ಬೆಂಗಳೂರು 560 001
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು 560 001
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು 560 003
7. ನಿರ್ದೇಶಕರು, ಎನ್.ಸಿ.ಟಿ.ಇ., ಬೆಂಗಳೂರು
8. ನಿರ್ದೇಶಕರು / ಕಾರ್ಯದರ್ಶಿ, ಎ.ಐ.ಸಿ.ಟಿ.ಇ./ ಬಾರ್ ಕೌನ್ಸಿಲ್ ಆಫ್ ಇಂಡಿಯಾ, ಬೆಂಗಳೂರು / ನವದೆಹಲಿ.
9. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಮೈಸೂರು/ ಬೆಂಗಳೂರು/ ಮಂಗಳೂರು/ ಶಿವಮೊಗ್ಗ/ ಧಾರವಾಡ ಮತ್ತು ಗುಲ್ಬರ್ಗಾ
10. ಕುಲಸಚಿವರು (ಪರೀಕ್ಷಾಂಗ) / ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
11. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
12. ಸರ್ಕಾರಿ ಲೆಕ್ಕ ಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
13. ಪ್ರೊ. ಸುರೇಶ್, ಅಧ್ಯಕ್ಷರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು 06 –ವಿಶ್ವವಿದ್ಯಾನಿಲಯದ ವೆಬ್‌ಸೈಟಿನಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
14. ಉಪಕುಲಸಚಿವ/ಸಹಾಯಕ ಕುಲಸಚಿವ (ಸಾಮಾನ್ಯ/ ಪ್ರಾಧಿಕಾರ/ ಶೈಕ್ಷಣಿಕ/ ಅಭಿವೃದ್ಧಿ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
15. ಕುಲಪತಿಗಳ/ ಕುಲಸಚಿವರ/ ಕುಲಸಚಿವ (ಪರೀಕ್ಷಾಂಗ) ಅವರ/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
16. ಸಂಪಾದಕರು, ವಿಶ್ವವಿದ್ಯಾನಿಲಯ ಗೆಜೆಟ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
17. ಅಧೀಕ್ಷಕರು/ಎಲ್ಲಾ ಕಾರ್ಯನಿರ್ವಾಹಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
18. ರಕ್ಷಾ ಕಡತಕ್ಕೆ/ಕಛೇರಿ ಪ್ರತಿ